ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 1, Jul-Aug 2020, 26-39
©*IIMRD*, Mysuru
IIMRD JOURNALS
www.iimrd.com

# ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂವಿಧಾನ ಮತ್ತು ರೂಪುರೇಷೆಗಳು

ಡಾ. ಕೆ. ಗುರುಸ್ವಾಮಿ[1]

**ಪೀಠಿಕೆ**

ಭಾರತವು ಪ್ರಜಾಸತ್ತಾತ್ಮಕ, ಸಾರ್ವಭೌಮ, ಸಮಾಜವಾದ, ಜಾತ್ಯತೀತ, ಗಣರಾಜ್ಯ, ಪ್ರಜಾಪ್ರಭುತ್ವ ಮಾದರಿಯ ಆಡಳಿತ ವ್ಯವಸ್ಥೆಯನ್ನು ಹೊಂದಿರುವ ರಾಷ್ಟ್ರ. ಈ ವ್ಯವಸ್ಥೆಯ ಮೂಲವೇ ಬಿ.ಆರ್. ಅಂಬೇಡ್ಕರ್‌ರವರ ಅಗಣಿತ ಬೌದ್ಧಿಕ ಶಕ್ತಿಯ ಕಾಣಿಕೆಯಾದ 'ಭಾರತದ ಸಂವಿಧಾನ'. ಇದು ದೇಶದ ಪವಿತ್ರ ಧಾರ್ಮಿಕ ಗ್ರಂಥವಾಗಿದ್ದು, ಇಲ್ಲಿನ ಪ್ರತಿಯೊಬ್ಬ ನಾಗರಿಕನೂ ಹೆಮ್ಮೆಯಿಂದ ಬದುಕಲು ಕಾನೂನು ಚೌಕಟ್ಟು, ನೀತಿನಿಯಮ, ಕಾಯ್ದೆ–ಕಟ್ಟಳೆ, ನೀತಿಸಂಹಿತೆ, ಹಕ್ಕುಬಾಧ್ಯತೆಗಳನ್ನು ರೂಪಿಸಿ ಇವುಗಳ ಮುಂದೆ 'ಎಲ್ಲರೂ ಸಮಾನರೇ ಹೊರತು ಯಾರು ಮೇಲೂ ಅಲ್ಲ ಕೀಳು ಅಲ್ಲ' ಎಂದು ಹೇಳಿದೆ. ಹೀಗಾಗಿ ಈ ಸಂವಿಧಾನ ತನ್ನ ಸುವ್ಯವಸ್ಥಿತ ಕಾರ್ಯವೈಖರಿಯ ನಿರ್ಮಾತೃವಾಗಿ ವಿಶ್ವದ ಇತರೆ ರಾಷ್ಟ್ರಗಳಿಗೆ ಮಾದರಿಯಾಗಿದೆ. ಅಲ್ಲದೆ ಜನಪರ ಸಂಘಟನೆಗಳ ಸಮಾಜಸೇವೆಯ ಪ್ರಣಾಳಿಕೆ ಅಥವಾ ಸಾಂಸ್ಥಿಕ ಸಂವಿಧಾನದ ರಚನೆಗೆ ಸ್ಫೂರ್ತಿಯಾಗಿದೆ. ಅಲ್ಲದೆ ಸಂಘಟನಾ ಹೋರಾಟಕ್ಕೆ ದೀಶಕ್ತಿಯೂ ಆಗಿದೆ. ಇಂತಹ ಸಂಘಟನೆಗಳ ಸಾಲಿಗೆ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' (ಕ.ದ.ಸಂ.ಸ) ಸೇರುತ್ತದೆ. ಇದು ತನ್ನ ದಲಿತಪರ ಕ್ರಿಯಾಶೀಲ ಚಟುವಟಿಕೆಗಳನ್ನು ಶಿಸ್ತುಬದ್ಧವಾಗಿ ಕೈಗೊಳ್ಳಲು ನೀತಿನಿಯಮಗಳಾಧರಿತ ತನ್ನದೇ ಆದ 'ಸಂವಿಧಾನ'ವನ್ನು ರಚಿಸಿಕೊಂಡಿತ್ತು. ಜೊತೆಗೆ ಇದು ತನ್ನದೇ ಆದ ಮಾದರಿಪ್ರಾಯವಾದ ರೂಪುರೇಷೆಗಳನ್ನು ಒಳಗೊಂಡಿತ್ತು. ಆದುದರಿಂದ ಈ ಲೇಖನದಲ್ಲಿ ಕ.ದ.ಸಂ.ಸ. ಸಂವಿಧಾನದ ಮೂಲಪ್ರತಿಯ ಪ್ರಕಟಣೆಯನ್ನು ಯಥಾವತ್ತಾಗಿ ಬಳಸಿಕೊಂಡು ಸವಿವರವಾಗಿ ತಿಳಿಸಲು ಪ್ರಯತ್ನಿಸಿದ್ದೇನೆ.

**ಕ.ದ.ಸಂ.ಸ. ಸಂವಿಧಾನ ರಚನೆಯ ಹಿನ್ನಲೆ**

ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿನ ಕಾಲೇಜೊಂದರಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಬಿ. ಕೃಷ್ಣಪ್ಪರವರು ಜಾತಿವಾದಿಗಳ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಹೋರಾಟದ ಶಕ್ತಿಯಾಗಿ 'ದಲಿತ ಸಂಘರ್ಷ ಸಮಿತಿ'ಯನ್ನು ಡಿಸೆಂಬರ್, 1974ರ ಸಂದರ್ಭದಲ್ಲಿ ಸ್ಥಾಪಿಸಿದರು.[1] ನಂತರ ಇದನ್ನು 'ದಲಿತ ಲೇಖಕ, ಕಲಾವಿದ ಯುವ ಸಂಘಟನೆ'ಯ ಬುದ್ಧಿಜೀವಿಗಳು, ಬರಹಗಾರರು, ಕವಿಗಳು ಮತ್ತು ಕಲಿಗಳು ಗಮನಿಸಿದ್ದರು. ತಕ್ಷಣ ಕಾರ್ಯಪ್ರವೃತ್ತರಾದ ಇವರುಗಳು ರಾಜ್ಯದ ಎಲ್ಲಾ ದಲಿತ ಸಂಘಟನೆಗಳ ಮುಂದಾಳುಗಳನ್ನು ಜೂನ್, 1977ರಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಡೆದ 'ಕರ್ನಾಟಕ ದಲಿತ ಬರಹಗಾರ ಮತ್ತು ಕಲಾವಿದರ ಒಕ್ಕೂಟ ಸಾಹಿತ್ಯ ಸಮ್ಮೇಳನ'ದಲ್ಲಿ ಒಟ್ಟುಗೂಡಿಸಿ ರಾಜ್ಯದ ದಲಿತರ ಏಕೀಕೃತ ಸಂಘಟನೆಯಾಗಿ 'ದಲಿತ ಸಂಘರ್ಷ ಸಮಿತಿ'ಯನ್ನು

[1] *ಸಮಾಜ–ವಿಜ್ಞಾನ ಶಿಕ್ಷಕರು, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೊಳೆನರಸೀಪುರ, ಹಾಸನ.*

ಒಪ್ಪಿಕೊಂಡರು.[2] ಇದು ಮುಂದೆ 'ಕ.ದ.ಸಂ.ಸ.'ಯಾಗಿ ರಚನೆಯಾಯಿತು. ಇದು 'ಕಸಪೊರಕೆ ಮತ್ತು ಪಿಕಾಸಿ'ಯನ್ನು ತನ್ನ ಸಂಘಟನೆಯ ಲಾಂಛನವಾಗಿ ಮಾಡಿಕೊಂಡಿತು.[3] ಸಮಾಜದಲ್ಲಿ ಶತಶತಮಾನಗಳಿಂದ 'ಜಾತೀಯತೆಯ ಕೊಳಕು' ಕಸವಾಗಿ ಜಡ್ಡುಗಟ್ಟಿಕೊಂಡು ಕೆಟ್ಟವಾಸನೆಯಿಂದ ನಾರುತ್ತಿದ್ದುದನ್ನು ಸಂಘಟನೆಯ ಪಿಕಾಸಿಯಿಂದ ಅಗೆದು ಹೋರಾಟವೆಂಬ ಪೊರಕೆಯಿಂದ ಸ್ವಚ್ಛಗೊಳಿಸಿ ಸಮಾನತೆಯ ನಿರ್ಮಲ ಬದುಕನ್ನು ಕಟ್ಟಿಕೊಳ್ಳುವುದು ಈ ಲಾಂಛನದ ಸಂಕೇತವಾಗಿತ್ತು.[4]

ಕ.ದ.ಸಂ.ಸ.ಯು ಅಮೆರಿಕಾದ ಬ್ಲಾಕ್ ಪ್ಯಾಂಥರ್ಸ್ ಹಾಗೂ ಮಹಾರಾಷ್ಟ್ರದ ದಲಿತ್ ಪ್ಯಾಂಥರ್ಸ್ ಎಂಬ ಕ್ರಾಂತಿಕಾರಿ ಸಂಘಟನೆಗಳ ಪ್ರಭಾವದಿಂದ ಜನ್ಮ ತಾಳಿತ್ತು. ಹೀಗಾಗಿ ಇದರ ಶಿಸ್ತು, ಸಂಯಮ, ಶ್ರದ್ಧೆಯುಕ್ತ ದಲಿತ ಸಂವೇದನೆಯನ್ನೊಳಗೊಂಡ ಹೋರಾಟಗಳಿಗೆ 'ಪ್ರಣಾಳಿಕೆ'ಯೊಂದರ ಅಗತ್ಯತೆ ಉದ್ಭವಿಸಿತ್ತು. ಆಗ ದೇವನೂರು ಮಹಾದೇವರವರು ದಲಿತ್ ಪ್ಯಾಂಥರ್ಸ್‌ನ ಪ್ರಣಾಳಿಕೆಯನ್ನೇ ಮರಾಠಿ ಭಾಷೆಯಿಂದ ಕನ್ನಡ ಭಾಷೆಗೆ ತರ್ಜುಮೆ ಮಾಡಿದರು.[5] ನಂತರ ಇದನ್ನು ಕ.ದ.ಸಂ.ಸ.ದ ಪ್ರಣಾಳಿಕೆಯಲ್ಲಿ ಕೆಲವು ತಿದ್ದುಪಡಿ ಮಾಡುವ ರೀತಿಯಲ್ಲಿ ಅಳವಡಿಸಿಕೊಳ್ಳಬೇಕೆಂದು ತೀರ್ಮಾನಿಸಿ, 18 ನವೆಂಬರ್, 1984ರಲ್ಲಿ ಧಾರವಾಡದಲ್ಲಿ ಆಯೋಜಿಸಿದ್ದ ಕ.ದ.ಸಂ.ಸ.ದ ಮಹಾಸಭೆಯಲ್ಲಿ ಈ ಪ್ರಣಾಳಿಕೆ 'ಕ.ದ.ಸಂ.ಸ. ಸಂವಿಧಾನ'ವಾಗಿ ಜಾರಿಗೆಬಂತು.[6] ಇದು ಕ.ದ.ಸಂ.ಸ.ದ ಸವರ್ಣೀಯರ ವಿರುದ್ಧ ಸಂಘಟನಾತ್ಮಕ ಹೋರಾಟಗಳಿಗೆ ಜೀವ ತುಂಬಲು ತನ್ನದೇ ಆದ ವಿಧಿವಿಧಾನಗಳಾಧರಿತ ರೂಪುರೇಷೆಗಳನ್ನು ಹೊಂದಿತ್ತು. ಅವುಗಳನ್ನು ಸಂವಿಧಾನದ ಮೂಲಪ್ರತಿಯ ಅನುಸಾರ ಈ ಕೆಳಕಂಡಂತೆ ತಿಳಿದುಕೊಳ್ಳಬಹುದು.

**1. ಹೆಸರು**

ಅ) ಸಂಘಟನೆಯ ಹೆಸರು 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಎಂದು. ಮುಂದೆ ಇದನ್ನು ಸಂಕ್ಷಿಪ್ತವಾಗಿ 'ದಸಂಸ' (ಇಂಗ್ಲಿಷ್‌ನಲ್ಲಿ 'ಡಿಎಸ್‌ಎಸ್') ಎಂದು ಕರೆಯಲಾಗುವುದು. ಸದ್ಯಕ್ಕೆ ಸಂಘಟನೆಯ ವ್ಯಾಪ್ತಿ ಕರ್ನಾಟಕ ರಾಜ್ಯ ಮಾತ್ರ. ಮುಂದೆ ರಾಷ್ಟ್ರಮಟ್ಟದಲ್ಲಿ ದಲಿತ ಸಂಘಟನೆಗಳ ಒಕ್ಕೂಟ ಏರ್ಪಟ್ಟಾಗ ಇದು ರಾಷ್ಟ್ರ ವ್ಯಾಪ್ತಿ ಪಡೆದುಕೊಳ್ಳುತ್ತದೆ. ಆಗ ರೂಪಿಸಲಾಗುವ ಸಂವಿಧಾನವನ್ನೇ ಅಳವಡಿಸಿಕೊಳ್ಳುತ್ತದೆ.

ಆ) ದಲಿತ ಅರ್ಥ: ದಲಿತರು ಎಂದರೆ ಅಸ್ಪೃಶ್ಯರು ಮತ್ತು ಜಾತಿಯಿಂದ ಅವಮಾನಿತರಾದವರು. ಮತ್ತು ಹೇಳಬೇಕೆಂದರೆ ಯಾರು ಹಿಂದೂ ಚಾತುರ್ವರ್ಣದ ಶ್ರಮ ವಿಭಜನೆಯ ಕುತಂತ್ರಕ್ಕೆ ಈಡಾಗಿ ಕೀಳುವೃತ್ತಿಗಳನ್ನೇ ತಲೆತಲಾಂತರದಿಂದ ಅವಲಂಬಿಸಿ ಜಾತಿಯ ಹೆಸರು ಹೇಳಿಕೊಳ್ಳಲು ನಾಚಿಕೆಪಡುತ್ತಾರೋ ಅವರು.

**2. ಗುರಿ ಮತ್ತು ಮಾರ್ಗ**

(ಅ) ಬದುಕಿನ ಎಲ್ಲಾ ಸ್ತರಗಳಲ್ಲೂ ಬೇರುಬಿಟ್ಟಿರುವ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಅಸಮಾನತೆಗಳಿಂದ ದಲಿತರ ವಿಮೋಚನೆ. ಈ ವಿಮೋಚನಾ ಗುರಿಯನ್ನು ಅಹಿಂಸಾತ್ಮಕ ಮಾರ್ಗದಿಂದ ಸಾಧಿಸುವುದು.

(ಆ) ದೇಶದ ಎಲ್ಲಾ ಸಂಪತ್ತು, ಉತ್ಪಾದನಾ ಸಾಧನಗಳ ಒಡೆತನವು ಕೆಲವೇ ಜನ ಮೇಲುಜಾತಿ ಮತ್ತು ಮೇಲು ವರ್ಗಗಳ ಗುತ್ತಿಗೆಯಾಗಿದೆ. ಈ ಸಂಪತ್ತು–ಸಾಧನಗಳನ್ನು ಸಾಮಾಜೀಕರಿಸಿ ಜಾತಿರಹಿತ ಸಮಾಜವನ್ನು ಕಟ್ಟುವುದು. ಈ ಗುರಿಯನ್ನು ಸಂವಿಧಾನದಲ್ಲೇ (ಕಾರ್ಯಾಂಗ ಮತ್ತು ಶಾಸಕಾಂಗಗಳ ಹಸ್ತಕ್ಷೇಪವಿಲ್ಲದಂತೆ) ಅಳವಡಿಸಿ ಹತ್ತು ವರ್ಷಗಳಲ್ಲಿ ಸಾಧಿಸಬೇಕೇಂಬುದು ಡಾ. ಬಿ.ಆರ್. ಅಂಬೇಡ್ಕರ್‌ರವರ ಆಶಯವಾಗಿತ್ತು. ಈ ಆಶಯ ಆಶಯವಾಗಿಯೇ ಉಳಿದಿದೆ. ನಾವೀಗ ಅವರ ಆಶಯವನ್ನು ಕಾರ್ಯಗತಗೊಳಿಸಬೇಕಾಗಿದೆ.

ಇ) ರಾಷ್ಟ್ರೀಯ–ಅಂತರಾಷ್ಟ್ರೀಯ ಮಟ್ಟದ ಸ್ವಾಭಿಮಾನಿ ಮತ್ತು ಸ್ವಾತಂತ್ರ್ಯ ಹೋರಾಟಗಳನ್ನು ಗೌರವಿಸಿ ಬೆಂಬಲಿಸುವುದು.

ಈ) ಅಲ್ಪಸಂಖ್ಯಾತರ ಮೇಲೆ ನಡೆಯುವ ಎಲ್ಲಾ ಬಗೆಯ ಮತಾಂಧ ದಬ್ಬಾಳಿಕೆಗಳನ್ನು ವಿರೋಧಿಸುವುದು.

ಉ) ಪ್ರೀತಿ, ಸಮಾನತೆ, ಸೋದರತೆಗಳ ನೆಲಗಟ್ಟು ಸ್ಥಾಪಿಸುವುದು.

ಊ) 'ಅಸ್ಪೃಶ್ಯರಂಥ ಅವಮಾನಿತ ಜಾತಿಗಳ ಆಳ್ವಿಕೆಯನ್ನು ಜಾತಿ ಮತೀಯವಾದ ಭಾರತೀಯತೆಯು ಒಪ್ಪಿದಾಗ ಮಾತ್ರವೇ ಸಾಂಸ್ಕೃತಿಕ ವಿಮೋಚನೆ ಪೂರ್ಣವಾಗುವುದು' ಎಂಬ ಈ ಸಾಂಸ್ಕೃತಿಕ ನಿಜವನ್ನು ಜನತೆಗೆ ಮನಗಾಣಿಸುವುದು.

3. **ಸದಸ್ಯತ್ವ**

ಅ) ದಸಂಸ ಕಾರ್ಯಕ್ರಮ, ಸಂವಿಧಾನ ಮತ್ತು ನೀತಿಗಳಿಗೆ ಬದ್ಧರಾಗುವವರು. ಸದಸ್ಯತ್ವಕ್ಕೆ ಕನಿಷ್ಠ ವಯೋಮಿತಿ 15 ವರ್ಷ.

ಆ) ಸದಸ್ಯತ್ವದ ವಾರ್ಷಿಕ ಶುಲ್ಕ ಒಂದು ರೂಪಾಯಿ. ಈ ಹಣ ಸಂಪೂರ್ಣವಾಗಿ ರಾಜ್ಯ ಸಮಿತಿಗೇ ಸೇರತಕ್ಕದ್ದು.

ಇ) ರಾಜಕೀಯ ಪಕ್ಷ ಮತ್ತು ಅವುಗಳ ಅಂಗಸಂಸ್ಥೆಗಳಿಗೆ ಸದಸ್ಯರಾದವರು ದಸಂಸ ಸದಸ್ಯರಾಗಲು ಅನರ್ಹರು.

ಈ) ಕೋಮುಭಾವನೆ ಬಿತ್ತುವ (ಉದಾಹರಣೆ: ಆರೆಸ್ಸೆಸ್, ಜಮಾತೆ ಇಸ್ಲಾಮಿ ಇತ್ಯಾದಿ) ಸಂಘಟನೆಗಳ ಸದಸ್ಯರು ದಸಂಸ ಸದಸ್ಯರಾಗಲು ಅನರ್ಹರು.

ಉ) ದಲಿತರು ಮಾತ್ರ ದಸಂಸ ಪದಾಧಿಕಾರಿಗಳಾಗಲು ಅರ್ಹರು.

4. **ಸಂಘಟನೆಯ ಸ್ವರೂಪ**

ದಸಂಸವು ಗ್ರಾಮ, ಗ್ರೂಪ್ ಪಂಚಾಯ್ತಿ, ಹೋಬಳಿ, ತಾಲೂಕು, ನಗರ, ಜಿಲ್ಲೆ ಮತ್ತು ರಾಜ್ಯ ಸಮಿತಿಗಳನ್ನು ಹೊಂದಿರುತ್ತದೆ.

**ಅ) ಗ್ರಾಮ ಸಮಿತಿ:** ಕನಿಷ್ಠ ಹತ್ತು ಜನ ಪ್ರಾಥಮಿಕ ಸದಸ್ಯರನ್ನು ಹೊಂದಿರುವ ಗ್ರಾಮವು ಅಧಿಕೃತ ಗ್ರಾಮ ಸಮಿತಿ ಎನಿಸಿಕೊಳ್ಳುತ್ತದೆ.

ಈ ಸಮಿತಿಯ ಪ್ರಾಥಮಿಕ ಸದಸ್ಯರು ಸಭೆ ಸೇರಿ ಮೂರು ಜನ ಪದಾಧಿಕಾರಿಗಳನ್ನು ಚುನಾಯಿಸುತ್ತಾರೆ. ಅವರುಗಳೆಂದರೆ ಸಂಚಾಲಕ, ಸಂಘಟನಾ ಸಂಚಾಲಕ ಹಾಗೂ ಖಜಾಂಚಿ.

ಅತ್ಯಂತ ತಳಹಂತದ ಈ ಸಮಿತಿಯೇ ದಸಂಸ ಆಧಾರ.

ಆ) **ಗ್ರೂಪ್ ಪಂಚಾಯ್ತಿ ಸಮಿತಿ:** ಈ ಗ್ರೂಪ್ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಸಮಿತಿಗಳ ಪದಾಧಿಕಾರಿಗಳು ಸೇರಿ ಮೂರು ಜನರನ್ನು ಚುನಾಯಿಸುತ್ತಾರೆ. ಇವರೇ ಈ ಗ್ರೂಪ್ ಪಂಚಾಯ್ತಿ ಸಮಿತಿಯ ಪದಾಧಿಕಾರಿಗಳು. (ಅಂದರೆ, ಪ್ರತಿ ಗ್ರಾಮದ ಮೂವರು ಪ್ರತಿನಿಧಿಗಳು*ಗ್ರಾಮ ಸಮಿತಿಗಳ ಸಂಖ್ಯೆ=ಗ್ರೂಪ್ ಪಂಚಾಯ್ತಿ ಸಮಿತಿ).

ಇ) **ಹೋಬಳಿ ಸಮಿತಿ:** ಈ ಹೋಬಳಿಯ ವ್ಯಾಪ್ತಿಯಲ್ಲಿ ಬರುವ ಗ್ರೂಪ್ ಪಂಚಾಯ್ತಿ ಸಮಿತಿಗಳ ಪದಾಧಿಕಾರಿಗಳು ಸಭೆ ಸೇರಿ ಹೋಬಳಿಯ ಸಮಿತಿಯ ಮೂವರು ಪದಾಧಿಕಾರಿಗಳನ್ನು ಚುನಾಯಿಸುತ್ತಾರೆ. (ಅಂದರೆ, ಪ್ರತಿ ಗ್ರೂಪ್ ಪಂಚಾಯ್ತಿ ಸಮಿತಿಯ ಮೂವರು ಪದಾಧಿಕಾರಿಗಳು*ಗ್ರೂಪ್ ಪಂಚಾಯ್ತಿ ಸಮಿತಿಗಳ ಸಂಖ್ಯೆ=ಹೋಬಳಿ ಸಮಿತಿ).

ಈ) **ತಾಲ್ಲೂಕು ಸಮಿತಿ:** ಈ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಸಮಿತಿಗಳ ಪದಾಧಿಕಾರಿಗಳು ಸಭೆ ಸೇರಿ ತಾಲ್ಲೂಕು ಸಮಿತಿಯ ಮೂವರು ಪದಾಧಿಕಾರಿಗಳನ್ನು ಚುನಾಯಿಸುತ್ತಾರೆ. (ಅಂದರೆ, ಪ್ರತಿ ಗ್ರಾಮ ಸಮಿತಿಯ ಮೂವರು ಪದಾಧಿಕಾರಿಗಳು*ಗ್ರಾಮ ಸಮಿತಿಗಳ ಸಂಖ್ಯೆ=ತಾಲ್ಲೂಕು ಸಮಿತಿ).

ಉ) **ನಗರ ಸಮಿತಿ:** ಪ್ರತಿ ತಾಲ್ಲೂಕು ಕೇಂದ್ರವೂ ಒಂದೊಂದು ನಗರ ಸಮಿತಿಯನ್ನು ಹೊಂದಿರುತ್ತದೆ. ಈ ನಗರ ಸಮಿತಿಯಲ್ಲಿ ಮೂವರು ಪದಾಧಿಕಾರಿಗಳಿರುತ್ತಾರೆ. ಇವರನ್ನು ಆಯಾ ನಗರ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಸದಸ್ಯರು ಚುನಾಯಿಸುತ್ತಾರೆ.

ಊ) **ಜಿಲ್ಲಾ ಸಮಿತಿ:** ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ತಾಲ್ಲೂಕು ಸಮಿತಿಗಳ ಹಾಗೂ ತಾಲ್ಲೂಕು ನಗರ ಸಮಿತಿಗಳ ಪದಾಧಿಕಾರಿಗಳು ಸಭೆ ಸೇರಿ ಮೂರು ಜನ ಪದಾಧಿಕಾರಿಗಳನ್ನು ತಾಲ್ಲೂಕು ಸಮಿತಿಗೆ ಚುನಾಯಿಸುತ್ತಾರೆ. (ಅಂದರೆ, ತಾಲ್ಲೂಕು, ನಗರ ಸಮಿತಿಗಳುxತಾಲ್ಲೂಕು ನಗರ ಸಮಿತಿಗಳ ಸಂಖ್ಯೆ=ಜಿಲ್ಲಾ ಸಮಿತಿ).

ಋ) **ರಾಜ್ಯ ಸಮಿತಿ:** ಈ ಸಮಿತಿಯ ಪದಾಧಿಕಾರಿಗಳನ್ನು ಚುನಾಯಿಸುವ ಅಧಿಕಾರ ರಾಜ್ಯದ ಜಿಲ್ಲಾ ತಾಲ್ಲೂಕು ಸಮಿತಿಗಳ, ತಾಲ್ಲೂಕು ನಗರ ಸಮಿತಿಗಳ, ಜಿಲ್ಲಾ ಸಮಿತಿಗಳ ಪದಾಧಿಕಾರಿಗಳಿಗಿದೆ.

ಮೇಲಿನ ಪ್ರತಿ ಹಂತದ ಪದಾಧಿಕಾರಿಗಳು ಎರಡು ವರ್ಷಗಳಿಗೊಮ್ಮೆ ನಡೆಯುವ ಆಯಾ ಹಂತದ ಸಭೆಗಳಲ್ಲಿ ಚುನಾಯಿಸಲ್ಪಡಬೇಕು. ಒಂದು ಸಮಿತಿ ಪದಾಧಿಕಾರಿಯು ಇನ್ನೊಂದು ಸಮಿತಿಯ ಪದಾಧಿಕಾರಿಯು ಇನ್ನೊಂದು ಸಮಿತಿಯ ಪದಾಧಿಕಾರಿ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದರೆ, ಗೆದ್ದ ಸ್ಥಾನದಲ್ಲಿ ಮುಂದುವರಿಯಬೇಕು.

ಗ್ರಾಮ, ಗ್ರೂಪ್ ಪಂಚಾಯ್ತಿ, ಹೋಬಳಿ, ತಾಲ್ಲೂಕು, ನಗರ ಹಾಗೂ ಜಿಲ್ಲಾ ಸಮಿತಿಗಳಿಗೆ ಆಯಾಯ ಸ್ಥಳೀಕರೇ ಸ್ಪರ್ಧಿಸಬೇಕು. ಪ್ರಾಥಮಿಕ ಸದಸ್ಯ ಆದವನು ರಾಜ್ಯ ಸಮಿತಿ ಪದಾಧಿಕಾರಿ ಸ್ಥಾನಕ್ಕೆ ಸ್ಪರ್ಧಿಸಬಹುದು.

ಋ) ಕಾರ್ಯಕಾರಿ ಸಮಿತಿ: ಗ್ರಾಮ ಸಮಿತಿಯ ಮೂವರು ಪದಾಧಿಕಾರಿಗಳಲ್ಲದೇ ಇನ್ನೂ ನಾಲ್ಕು ಜನರನ್ನು ಆಯ್ಕೆ ಮಾಡಿ ಕಾರ್ಯಕಾರಿ ಸಮಿತಿಯನ್ನು ರಚಿಸಬೇಕು. ಗ್ರಾಮ ಸಮಿತಿಯ ಸಂಚಾಲಕರು ಗ್ರೂಪ್ ಪಂಚಾಯ್ತಿ ಸಮಿತಿಯ ಕಾರ್ಯಕಾರಿ ಸಮಿತಿಯಲ್ಲಿ ಸೇರುತ್ತಾರೆ. ಗ್ರೂಪ್ ಪಂಚಾಯ್ತಿ ಸಂಚಾಲಕರು ಹೋಬಳಿ ಸಮಿತಿಯ ಕಾರ್ಯಕಾರಿ ಸಮಿತಿಯಲ್ಲಿ ಸೇರುತ್ತಾರೆ. ಹೋಬಳಿ ಮಟ್ಟದಲ್ಲಿ ದಸಂಸ ಅಂಗಸಂಸ್ಥೆಗಳ ಸಮಿತಿಗಳಿದ್ದಲ್ಲಿ, ಅವುಗಳ ಸಂಚಾಲಕರನ್ನು ಕಾರ್ಯಕಾರಿ ಸಮಿತಿಯಲ್ಲಿ ಸೇರಿಸಿಕೊಳ್ಳಬೇಕು.

ತಾಲೂಕು, ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಕಾರ್ಯಕಾರಿ ಸಮಿತಿ ರಚನೆಗೂ ಇದೇ ಕ್ರಮ ಅನ್ವಯವಾಗುತ್ತದೆ.

**5. ನಿಬಂಧನೆಗಳು**

ಅ) ರಾಜ್ಯ ಸಮಿತಿ ಕೈಗೊಳ್ಳುವ ತೀರ್ಮಾನಗಳು ಎಲ್ಲಾ ಸದಸ್ಯರಿಗೆ ಹಾಗೂ ಎಲ್ಲಾ ಹಂತದ ಸಮಿತಿಗಳಿಗೆ ಅನ್ವಯವಾಗುತ್ತದೆ.

ಆ) ಜಿಲ್ಲಾ ಸಮಿತಿ ಕೈಗೊಳ್ಳುವ ತೀರ್ಮಾನಗಳು ಆಯಾ ಜಿಲ್ಲೆಯ ಎಲ್ಲಾ ಸದಸ್ಯರಿಗೆ ಹಾಗೂ ಎಲ್ಲಾ ತಳಸಮಿತಿಗಳಿಗೆ ಅನ್ವಯವಾಗುತ್ತವೆ.

ಇ) ತಾಲ್ಲೂಕು ಸಮಿತಿ ಕೈಗೊಳ್ಳುವ ತೀರ್ಮಾನಗಳು ಆಯಾ ತಾಲ್ಲೂಕಿನ ಎಲ್ಲಾ ಸದಸ್ಯರಿಗೆ ಹಾಗೂ ತಳಸಮಿತಿಗಳಿಗೆ ಅನ್ವಯವಾಗುತ್ತವೆ.

ಈ) ನಗರ ಸಮಿತಿ ಕೈಗೊಳ್ಳುವ ತೀರ್ಮಾನಗಳು ಆಯಾ ನಗರದ ಎಲ್ಲಾ ಸದಸ್ಯರಿಗೆ ಅನ್ವಯವಾಗುತ್ತದೆ.

ಉ) ಹೋಬಳಿ ಸಮಿತಿ ಕೈಗೊಳ್ಳುವ ತೀರ್ಮಾನಗಳು ಆ ಹೋಬಳಿಯ ಎಲ್ಲಾ ಸದಸ್ಯರಿಗೆ ಹಾಗೂ ಗ್ರಾಮ ಸಮಿತಿಗಳಿಗೆ ಅನ್ವಯವಾಗುತ್ತವೆ.

ಊ) ಗ್ರಾಮ ಸಮಿತಿ ಕೈಗೊಳ್ಳುವ ತೀರ್ಮಾನಗಳು ತನ್ನ ಎಲ್ಲಾ ಸದಸ್ಯರಿಗೆ ಅನ್ವಯವಾಗುತ್ತವೆ.

**6. ಸದಸ್ಯರ ಹಕ್ಕು–ಕರ್ತವ್ಯಗಳು**

**ಅ) ಹಕ್ಕುಗಳು**

ಎ) ದಸಂಸ ಒಟ್ಟು ನೀತಿ ಮತ್ತು ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಪಾಲುಗೊಳ್ಳುವ ಹಕ್ಕಿದೆ.

ಬಿ) ದಸಂಸ ಯಾವುದೇ ಪದಾಧಿಕಾರಿಗಳನ್ನು ಅಥವಾ ನಿರ್ಣಯಗಳನ್ನು ವಿಮರ್ಶಿಸುವ ಹಕ್ಕಿದೆ. ಆದರೆ ಇಂಥ ವಿಮರ್ಶೆಯನ್ನು ಆಯಾ ಸಮಿತಿಗಳು ಏರ್ಪಡಿಸಿದ ದಸಂಸ ಸಭೆಗಳಲ್ಲಿ

ಮಾತ್ರ ಮಾಡತಕ್ಕದ್ದು. ಬೇರೆ ಸಂಘಟನೆಗಳೊಂದಿಗೆ ಸಂಚು ಮತ್ತು ಭ್ರಷ್ಟತೆಗಳಲ್ಲಿ ಪಾಲುಗೊಂಡ ಬಗೆಗಿನ ಪುರಾವೆಗಳಿದ್ದಲ್ಲಿ ಮೇಲಿನ ಎಲ್ಲಾ ಸಮಿತಿಗಳ ಗಮನಕ್ಕೆ ಲಿಖಿತ ಮೂಲಕವಾಗಿ ತಂದು, ಮೂರು ತಿಂಗಳಾದರೂ ಕ್ರಮ ಜರುಗದಿದ್ದಲ್ಲಿ, ಅಂಥ ಪ್ರಕರಣಗಳನ್ನು ಬಹಿರಂಗಗೊಳಿಸಬಹುದು.

ಸಿ) ದಸಂಸ ಚುನಾವಣೆಗಳಲ್ಲಿ ಮತ ನೀಡುವ ಯಾವುದೇ ಪದಾಧಿಕಾರ, ಆಯೋಗ, ನಿಯೋಗಗಳಿಗೆ ಚುನಾಯಿಸಲ್ಪಡುವ ಹಕ್ಕಿದೆ.

ಡಿ) ತಮ್ಮ ಹೇಳಿಕೆ–ಮಂಡನೆಗಳನ್ನು ಸಂಬಂಧಿಸಿದ ಗ್ರಾಮ, ಹೋಬಳಿ, ತಾಲ್ಲೂಕು, ನಗರ, ಜಿಲ್ಲಾ ಮತ್ತು ರಾಜ್ಯ ಸಮಿತಿಗಳಿಗೆ ಸಲ್ಲಿಸುವ ಹಕ್ಕಿದೆ.

ಆ) **ಕರ್ತವ್ಯಗಳು**

ಎ) ದಸಂಸ ಕೆಲಸ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

ಬಿ) ದಸಂಸ ಧ್ಯೇಯ ಮತ್ತು ಸಂವಿಧಾನಕ್ಕೆ ಪೂರ್ಣ ನಿಷ್ಠೆಯಿಂದಿರಬೇಕು. ಇವನ್ನು ಅರ್ಥ ಮಾಡಿಕೊಂಡು ಕಾರ್ಯ ನಿರ್ವಹಿಸಬೇಕು.

ಸಿ) ದೇಶದ ಹಾಗೂ ದಲಿತ ವರ್ಗಗಳ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮಸ್ಯೆಗಳ ಕುರಿತು ತಮ್ಮ ಅರಿವಿನ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು.

ಡಿ) ಎಲ್ಲ ಜನರೊಂದಿಗೂ ಸ್ನೇಹ–ಸೌಹಾರ್ದಗಳ ಸಂಬಂಧ ಹೊಂದಿ ದಸಂಸ ಕಾರ್ಯಕ್ರಮ, ನೀತಿಗಳನ್ನು ಪ್ರಚಾರ ಮಾಡಬೇಕು.

ಇ) ದಸಂಸ ಹಿತಾಸಕ್ತಿಗಳಿಗೆ ಧಕ್ಕೆ ತರುವ ಅಪಪ್ರಚಾರದ ವಿರುದ್ಧ ಹೋರಾಡಬೇಕು.

ಎಫ್) ವ್ಯಕ್ತಿಗತ ನಿಂದೆ, ಗುಂಪುಗಾರಿಕೆ ಹಾಗೂ ದಸಂಸ ವಿರೋಧಿ ಚಟುವಟಿಕೆಗಳಲ್ಲಿ ತೊಡಗಬಾರದು.

ಜಿ) ಬಹುಮತ ನಿರ್ಣಯಗಳಿಗೆ ಮತ್ತು ಮೇಲಿನ ಸಮಿತಿಗಳ ನಿರ್ಣಯಗಳಿಗೆ ಬದ್ಧರಾಗಿರಬೇಕು.

ಎಚ್) ಸಂಘಟನೆಯ ಒಳಗೆ ಇತ್ಯರ್ಥಗೊಳ್ಳದ ತನಕ ಭಿನ್ನಾಭಿಪ್ರಾಯ ಹಾಗೂ ಇತರ ಮಾಹಿತಿಗಳನ್ನು ಬಹಿರಂಗಪಡಿಸಬಾರದು.

7. **ಅಂಗಸಂಸ್ಥೆಗಳು**

ದಸಂಸಕ್ಕೆ ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ಮಹಿಳಾ ಒಕ್ಕೂಟ, ದಲಿತ ನೌಕರರ ಒಕ್ಕೂಟ, ದಲಿತ ಕಲಾಮಂಡಳಿ ಹಾಗೂ ಪ್ರಕಾಶನ ಎಂಬ ಪ್ರತ್ಯೇಕವಾದ ಅಂಗಸಂಸ್ಥೆಗಳಿರುತ್ತವೆ. ಇವುಗಳು ಪ್ರತ್ಯೇಕವಾಗಿ ದಸಂಸ ಹಿತಾಸಕ್ತಿಗೆ ಪೂರಕವಾಗಿ ರಚಿಸಿಕೊಂಡ ಸಂವಿಧಾನಗಳ ಪ್ರಕಾರ ಕಾರ್ಯ ನಿರ್ವಹಿಸುತ್ತವೆ. ಪ್ರತಿ ಅಂಗಸಂಸ್ಥೆಯ ಕಾರ್ಯಕಾರಿ ಸಮಿತಿಯಲ್ಲಿ ಆಯಾ ಹಂತದ ದಸಂಸ ಸಂಚಾಲಕರು ಸೇರಿರಬೇಕು.

**8. ಪೌರ ಚರ್ಮ ಕಾರ್ಮಿಕರ ಸಂಘಟನೆ**

ದಲಿತ ಸ್ಥಿತಿಯ ಜೀವದಂತೆ ಬಡತನ ಮತ್ತು ಅವಮಾನದ ಬದುಕಿನ ಪೌರಕಾರ್ಮಿಕರು ಹಾಗೂ ಚರ್ಮಕಾರ್ಮಿಕರು ದಸಂಸ ಜೀವಾಳ. ಈ ಜೀವಾಳದ ಸಂಘಟನೆ ದಸಂಸದ ಮೊಟ್ಟಮೊದಲನೇ ಕೆಲಸವಾಗಿದೆ, ಜೀವವಾಗಿದೆ.

**9. ರಾಜ್ಯ ಸಮಿತಿ**

ಅ) ರಾಜ್ಯ ಸಮಿತಿಗೆ ಸಂಚಾಲಕರು, ಇಬ್ಬರು ಸಂಘಟನಾ ಸಂಚಾಲಕರು ಹಾಗೂ ಖಜಾಂಚಿಗಳು ಚುನಾಯಿತರಾಗುತ್ತಾರೆ. ಎಲ್ಲಾ ಜಿಲ್ಲೆಗಳ ಸಂಚಾಲಕರು ಹಾಗೂ ದಸಂಸ ಅಂಗಸಂಸ್ಥೆಗಳ ಮುಖ್ಯಸ್ಥರು ರಾಜ್ಯ ಸಮಿತಿಗೆ ಸದಸ್ಯರಾಗುತ್ತಾರೆ.

ಆ) ದಸಂಸ ಇಲ್ಲದ ಜಿಲ್ಲೆಗಳಲ್ಲಿ ಹಂಗಾಮಿ ಸಮಿತಿಯನ್ನು ರಚಿಸುವ ಅಧಿಕಾರವು ಈ ಸಮಿತಿಗೆ ಇದೆ.

ಇ) ರಾಜ್ಯ ಸಮಿತಿಯು ಕನಿಷ್ಠ ಎರಡು ತಿಂಗಳಿಗೊಮ್ಮೆ ಸೇರಬೇಕು.

ಈ) ಜಿಲ್ಲೆ, ತಾಲ್ಲೂಕು ಸಮಿತಿಗಳು ತಮ್ಮ ಕರ್ತವ್ಯಗಳನ್ನು ಸೂಕ್ತವಾಗಿ, ಸಮರ್ಥವಾಗಿ ನಿರ್ವಹಿಸುವಂತೆ ಸಮನ್ವಯ ಸಾಧಿಸುವುದು ಈ ಸಮಿತಿಯ ಜವಾಬ್ದಾರಿ.

ಉ) ದಸಂಸ ನಿಧಿಯನ್ನು ಸಂಗ್ರಹಿಸುವ ಹೊಣೆ ಈ ಸಮಿತಿಗೆ ಸೇರಿದೆ.

ಊ) ರಾಜ್ಯ ಸಮ್ಮೇಳನಕ್ಕೆ ವಾರ್ಷಿಕ ವರದಿಗಳನ್ನು ಸಲ್ಲಿಸಬೇಕು.

ಋ) ಸಂಘಟನೆಯ ಅನುಕೂಲಕ್ಕೆ ಮತ್ತು ನಿಯಂತ್ರಣಕ್ಕೆ ಅನುಕೂಲವಾಗುವ ನಿಯಮಗಳನ್ನು ರೂಪಿಸುವ ಅಧಿಕಾರ ಈ ಸಮಿತಿಗಿದೆ.

**10. ರಾಜ್ಯ ಕಾರ್ಯನಿರ್ವಾಹಕ ಸಮಿತಿ**

ಅ) ದೇಶದ ಆಗುಹೋಗುಗಳ ಹಾಗೂ ದಲಿತರ ಬದುಕಿನ ಮೇಲೆ ಪರಿಣಾಮ ಬೀರುವ ಘಟನೆಗಳ ಬಗ್ಗೆ ತಕ್ಷಣ ಪ್ರತಿಕ್ರಿಯೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ರಚನೆಯಾಗುತ್ತದೆ.

ಆ) ರಾಜ್ಯ ಸಮಿತಿಯು ರಚನೆಯಾಗುವ ದಿನವೇ ಸಭೆ ನಡೆಸಿ ಈ ಸಮಿತಿಯ ನಾಮಕರಣವಾಗುತ್ತದೆ. ಒಟ್ಟು ಐವರ ಈ ಸಮಿತಿಯಲ್ಲಿ ರಾಜ್ಯ ಸಂಚಾಲಕರು, ಇಬ್ಬರು ರಾಜ್ಯ ಸಂಘಟನಾ ಸಂಚಾಲಕರು ಇದ್ದು ರಾಜ್ಯ ಸಮಿತಿಯ ಇನ್ನಿಬ್ಬರನ್ನು ದಸಂಸ ಪ್ರಾಥಮಿಕ ಸದಸ್ಯರಲ್ಲಿ ಆಯ್ಕೆ ಮಾಡುವುದು.

ಇ) ರಾಜ್ಯ ಕಾರ್ಯನಿರ್ವಾಹಕ ಸಮಿತಿಯು ಕನಿಷ್ಠ ತಿಂಗಳಿಗೆ ಒಂದು ಬಾರಿ ಸಭೆ ಸೇರಬೇಕು.

ಈ) ಜಿಲ್ಲಾ ಕಾರ್ಯಕಾರಿ ಸಮಿತಿಗಳಿಗೆ ಪ್ರಚಾರ ಮತ್ತು ಶಿಕ್ಷಣದ ಸಾಮಾಗ್ರಿಗಳನ್ನು ಒದಗಿಸಬೇಕು.

ಊ) ಪ್ರತಿ ಬಾರಿಯೂ ರಾಜ್ಯ ಕಾರ್ಯಕಾರಿ ಸಮಿತಿ ಸಭೆಗೆ ವರದಿಯನ್ನು ಸಲ್ಲಿಸಬೇಕು.

**11. ರಾಜ್ಯ ಸಮಿತಿ ಪದಾಧಿಕಾರಿಗಳ ಕರ್ತವ್ಯಗಳು**

**ಅ) ರಾಜ್ಯ ಸಂಚಾಲಕರು**

ಎ) ಇವರು ಇಡೀ ಸಂಘಟನೆಯ ಮುಖ್ಯಸ್ಥರಾಗಿದ್ದು ರಾಷ್ಟ್ರದ, ರಾಜ್ಯದ ಸನ್ನಿವೇಶ, ಸ್ಥಿತಿಗತಿ ಮತ್ತು ರಾಷ್ಟ್ರೀಯ ಸಮಸ್ಯೆ ಇವೆಲ್ಲವನ್ನು ಸಮಗ್ರೀಕರಿಸಿ ವಾರ್ಷಿಕ ವರದಿ ಪ್ರಕಟಿಸಬೇಕು.

ಬಿ) ದಸಂಸ ನೀತಿ, ಧೋರಣೆಗಳಿಗೆ ಸಂಬಂಧಿಸಿದಂತೆ ರಾಜ್ಯ ಸಮಿತಿಯ ಪರವಾಗಿ ಪತ್ರಿಕಾ ಹೇಳಿಕೆಗಳನ್ನು ನೀಡಬೇಕು.

ಸಿ) ರಾಜ್ಯ ಸಮಿತಿ ಸಭೆಗಳ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮವನ್ನು ನಿಯಮಗಳಿಗೆ ಅನುಸಾರವಾಗಿ ನಿರ್ವಹಿಸಬೇಕು.

ಡಿ) ರಾಜ್ಯ ಸಮ್ಮೇಳನದ ರಾಜ್ಯ ಸಮಿತಿಯ ಮತ್ತು ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಬೇಕು.

ಇ) ರಾಜ್ಯ ಸಮಿತಿಯ ಮತ್ತು ರಾಜ್ಯ ಕಾರ್ಯನಿರ್ವಾಹಕ ಸಮಿತಿಯ ಪತ್ರ ವ್ಯವಹಾರಗಳನ್ನು ನಿರ್ವಹಿಸಬೇಕು.

ಎಫ್) ಕಾಲಕಾಲಕ್ಕೆ ಮತ್ತು ವರ್ಷಕ್ಕೊಮ್ಮೆ ರಾಜ್ಯ ಸಮಿತಿಗೆ ಮತ್ತು ಕಾರ್ಯನಿರ್ವಾಹಕ ಸಮಿತಿಗೆ ಅಗತ್ಯವಾದ ದಾಖಲೆಗಳನ್ನು ಹಾಗೂ ಅವುಗಳ ಕಾರ್ಯಗಳ ವರದಿಯನ್ನು ಸಂಘಟನಾ ಸಂಚಾಲಕರ ಸಹಕಾರದೊಂದಿಗೆ ತಯಾರಿಸಬೇಕು.

ಜಿ) ಜಿಲ್ಲಾ ಸಮಿತಿಗಳಿಂದ ಬರುವ ವರದಿಗಳನ್ನು ವಿಮರ್ಶಿಸಿ ಭದ್ರಪಡಿಸಬೇಕು.

**ಆ) ರಾಜ್ಯ ಸಂಘಟನಾ ಸಂಚಾಲಕರು–1**

ಎ) ರಾಜ್ಯದ ಪೌರಕಾರ್ಮಿಕರ ಹಾಗೂ ಚರ್ಮಕಾರ್ಮಿಕರ ಸಂಘಟನೆಯನ್ನು ರಾಜ್ಯಗಳಲ್ಲಿರುವ ನಗರ ಸಂಚಾಲಕರ ಸಹಕಾರದೊಂದಿಗೆ ಸಮನ್ವಯಗೊಳಿಸುವುದು ಇವರ ಹೊಣೆ.

ಬಿ) ಈ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸುವುದು.

ಸಿ) ವರ್ಷಕ್ಕೊಮ್ಮೆಯಾದರೂ ರಾಜ್ಯದ ಎಲ್ಲಾ ಕಡೆ ಪ್ರವಾಸ ಮಾಡಿ ಪೌರಕಾರ್ಮಿಕರ ಹಾಗೂ ಚರ್ಮಕಾರ್ಮಿಕರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ರಾಜ್ಯ ಸಮಿತಿ ಸಭೆಗೆ ವರದಿ ಸಲ್ಲಿಸಬೇಕು.

ಡಿ) ರಾಜ್ಯ ಸಮಿತಿಗೆ ಕಾಲಕಾಲಕ್ಕೆ ಮತ್ತು ವರ್ಷಕ್ಕೊಮ್ಮೆ ಕಡ್ಡಾಯವಾಗಿ ವರದಿ ಸಲ್ಲಿಸಬೇಕು.

ಇ) ಪೌರ ಚರ್ಮಕಾರ್ಮಿಕರ ಸಂಘಟನೆ ಕಾರ್ಯಕ್ರಮಗಳನ್ನು ಕುರಿತಂತೆ ಪತ್ರಿಕಾ ಹೇಳಿಕೆ ನೀಡುವುದು.

ಇ) **ರಾಜ್ಯ ಸಂಘಟನಾ ಸಂಚಾಲಕರು–2**

ಎ) ಸಂಘಟನೆಯ ಆಂತರಿಕ ಬೆಳವಣಿಗೆಯ ಜವಾಬ್ದಾರಿ ಇವರದು.

ಬಿ) ರಾಜ್ಯ ಸಮ್ಮೇಳನ, ರಾಜ್ಯ ಸಮಿತಿ ಹಾಗೂ ರಾಜ್ಯ ಕಾರ್ಯನಿರ್ವಾಹಕ ಸಮಿತಿ ತೀರ್ಮಾನಗಳನ್ನು ಮತ್ತು ಸೂಚನೆಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳಿಗೆ ತಲುಪಿಸಬೇಕು. ದಸಂಸ ಎಲ್ಲಾ ಸಮಿತಿಗಳು ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವಂತೆ ನೋಡಿಕೊಳ್ಳಬೇಕು.

ಸಿ) ಜಿಲ್ಲಾ ಮಟ್ಟದ ಎಲ್ಲಾ ತರಬೇತಿ ಶಿಬಿರಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ, ಅವುಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.

ಡಿ) ಪ್ರತಿ ಜಿಲ್ಲೆಯಲ್ಲಿ ವರ್ಷಕ್ಕೊಮ್ಮೆಯಾದರೂ ಪ್ರವಾಸ ಮಾಡಿ ಸಂಘಟನೆಯ ಸ್ಥಿತಿಗತಿ, ಲೋಪದೋಷಗಳನ್ನು ರಾಜ್ಯ ಸಮಿತಿ ಸಭೆಯಲ್ಲಿ ಮಂಡಿಸಬೇಕು.

ಇ) ಜಿಲ್ಲಾ ಮಟ್ಟದ ಸಂಘಟನೆಗಳಲ್ಲಿ ಒಡಕುಗಳು ಗಂಭೀರವಾಗಿದ್ದಲ್ಲಿ, ಅಲ್ಲಿಗೆ ಭೇಟಿ ನೀಡಿ ಸೂಕ್ತ ರೀತಿಯಲ್ಲಿ ಪರಿಹರಿಸುವುದು.

ಎಫ್) ಸದಸ್ಯತ್ವ, ಕಾರ್ಯಕರ್ತರ ಪಟ್ಟಿ, ಪೂರ್ಣಾವಧಿ ಕಾರ್ಯಕರ್ತರು, ಜಿಲ್ಲೆಗಳಲ್ಲಿ ನಡೆಯುತ್ತಿರುವ ಹೋರಾಟಗಳು ಇತ್ಯಾದಿ ವಿವರಗಳನ್ನು ರಾಜ್ಯ ಸಮಿತಿ, ರಾಜ್ಯ ಕಾರ್ಯನಿವಾಹಕ ಸಮಿತಿ ಸಭೆಗಳಿಗೆ ನೀಡುತ್ತಿರಬೇಕು.

ಜಿ) ಸಂಘಟನೆಯ ಕಾರ್ಯಕ್ರಮಗಳ ಕುರಿತಂತೆ ಪತ್ರಿಕಾ ಹೇಳಿಕೆ ನೀಡುವುದು.

ಈ) **ರಾಜ್ಯ ಖಜಾಂಚಿ**

ಎ) ರಾಜ್ಯ ಖಜಾಂಚಿಯು ದಸಂಸ ನಿಧಿಯ ನಿರ್ವಹಣೆಗೆ ಪೂರ್ಣ ಜವಾಬ್ದಾರರು.

ಬಿ) ರಾಜ್ಯ ಸಮಿತಿಯ ಪರವಾಗಿ ಹಣವನ್ನು ಸಂಗ್ರಹಿಸಬೇಕು. ರಾಜ್ಯ ಸಂಚಾಲಕರ ಹಾಗೂ ಇವರ ಹೆಸರಲ್ಲಿ ತೆರೆದ ಜಂಟಿ ಖಾತೆಯ ಮೂಲಕ ಎಲ್ಲಾ ಹಣಕಾಸು ವ್ಯವಹಾರಗಳನ್ನು ನಡೆಸಬೇಕು.

ಸಿ) ಆಯವ್ಯಯಗಳನ್ನು ಸ್ಪಷ್ಟವಾಗಿ ದಾಖಲಿಸಬೇಕು.

ಡಿ) ವಾರ್ಷಿಕ ಆಯವ್ಯಯ ಪಟ್ಟಿಯನ್ನು ಪ್ರಕಟಿಸಬೇಕು.

ಇ) ಸಂಚಾಲಕ ಮತ್ತು ಸಂಘಟನಾ ಸಂಚಾಲಕರ ಸಹಕಾರದೊಂದಿಗೆ ದಸಂಸ ನಿಧಿ ಸಂಗ್ರಹಿಸುವ ಯೋಜನೆಗಳನ್ನು ರೂಪಿಸಬೇಕು.

**12. ಗ್ರಾಮದಿಂದ ತಾಲ್ಲೂಕು ಸಮಿತಿವರೆಗಿನ ಕಾರ್ಯಕ್ರಮಗಳ ಮಾದರಿ**

ಗತಿಗೆಟ್ಟ ವೃದ್ಧರಿಗೆ ಅಂಬಲಿ ಕೇಂದ್ರ ತೆರೆಯುವುದು, ಬೀದೀಲಿ ಬಿದ್ದ ರೋಗಿಗಳ ಹಾರೈಕೆಯಿಂದ ದಸಂಸ ತನ್ ರಚನಾತ್ಮಕ ಕಾರ್ಯಕ್ರಮ ಆರಂಭಿಸುತ್ತದೆ.

ಅ) ದಸಂಸ ಕಾರ್ಯಕ್ರಮ, ನೀತಿಗಳನ್ನು ಜನರಿಗೆ ವಿವರಿಸಿ ಹೇಳಬೇಕು. ಪಂಚಮದಂತಹ ಪ್ರಗತಿಪರ ಪತ್ರಿಕೆಗಳನ್ನು ಸಾಮೂಹಿಕವಾಗಿ ಕೂತು ಓದಿ ಅನಕ್ಷರಸ್ಥರಿಗೆ ವಿವರಿಸಬೇಕು.

ಆ) ವಯಸ್ಕರ ಶಿಕ್ಷಣ ಶಾಲೆ ಪ್ರಾರಂಭಿಸಿ ಅಕ್ಷರಭ್ಯಾಸ ಮಾಡಿಸಬೇಕು.

ಇ) ದಲಿತ ಕಲಾಮಂಡಲಿಯ ಹಾಡು, ನಾಟಕಗಳನ್ನು ಕಲಿಸಬೇಕು.

ಈ) ಮೂಢನಂಬಿಕೆ, ಹಿಂದೂ ಗುಲಾಮ ಮೌಲ್ಯಗಳ ವಿರುದ್ಧ ಹಂತಹಂತವಾಗಿ ಶಿಕ್ಷಣ ನೀಡಬೇಕು.

ಉ) ಆರು ವರ್ಷ ತುಂಬಿದ ಎಲ್ಲಾ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕೆ ಕಡ್ಡಾಯವಾಗಿ ಸೇರಿಸಬೇಕು.

ಊ) ಆಯಾ ಪ್ರದೇಶದ ಜನಸಂಖ್ಯೆ, ಜೀತಗಾರರು, ಭೂ ಸಂಬಂಧದ ಅಂಕಿಅಂಶಗಳನ್ನು ಸಂಗ್ರಹ ಮಾಡಬೇಕು.

ಋ) ಛಿದ್ರವಾಗಿರುವ ದಲಿತ ಸಮುದಾಯವನ್ನು ಸಾಂಸ್ಕೃತಿಕವಾಗಿ ಒಗ್ಗೂಡಿಸಲು, ಸಹಪಂಕ್ತಿ ಭೋಜನವನ್ನು, ಮನೆ ಪ್ರವೇಶ, ಮದುವೆ ಇತ್ಯಾದಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ೠ) ಸಾರ್ವಜನಿಕ ದೇವಸ್ಥಾನ, ಹೊಟೇಲ್ ಪ್ರವೇಶದಂತಹ ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ನಡೆಸಬೇಕು.

ಎ) ಸೇಂದಿ, ಶರಾಬು ಅಂಗಡಿಗಳ ವಿರುದ್ಧ ಕಾರ್ಯಕ್ರಮಗಳನ್ನು ರೂಪಿಸಬೇಕು.

ಏ) ಗೃಹ ಕೈಗಾರಿಕೆಗಳನ್ನು ಹಾಗೂ ಸಹಕಾರ ಸಂಘಗಳನ್ನು ಸ್ಥಾಪಿಸಬೇಕು.

ಐ) ಕೂಲಿ ಹೆಚ್ಚಳ, ನಿವೇಶನ, ಭೂಮಿ, ನೀರು ದೊರಕಿಸಿಕೊಳ್ಳಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು.

ಒ) ಕೊಲೆ, ಹಲ್ಲೆ, ಅತ್ಯಾಚಾರಗಳ ವಿರುದ್ಧ ಕಾರ್ಯಕ್ರಮವನ್ನು ರೂಪಿಸಬೇಕು.

ಓ) ಸರಳವಿವಾಹ, ಅಂತರ್ಜಾತಿ ವಿವಾಹಗಳನ್ನು ನಡೆಸಬೇಕು.

ಔ) 'ಜನತಾ ನ್ಯಾಯಾಲಯ'ಗಳನ್ನು ರೂಪಿಸುವತ್ತಾ ಹೆಚ್ಚಿನ ಗಮನ ನೀಡಬೇಕು. ದಲಿತರ ಮಧ್ಯದ ಜಗಳ ಬಿಕ್ಕಟ್ಟುಗಳನ್ನು ಇಂಥ ನ್ಯಾಯಾಲಯಗಳಲ್ಲೇ ಬಗೆಹರಿಸಬೇಕು. ಸಾಧ್ಯವಿದ್ದ ಕಡೆ ಪೊಲೀಸ್, ಕೋರ್ಟುಗಳಿಗೆ ಹೋಗುವುದನ್ನು ತಪ್ಪಿಸಬೇಕು.

ಅಂ) ಪ್ರಾಥಮಿಕ ಸದಸ್ಯರನ್ನು ಸತತ ಮಾಡಿಸುತ್ತಿರಬೇಕು.

ಅಃ) ವಂತಿಗೆ ಸಂಗ್ರಹಿಸಿದ್ದಲ್ಲಿ ಶೇ. 25ರಷ್ಟು ಹಣವನ್ನು ತಮ್ಮ ಮೇಲಿನ ಸಮಿತಿಗೆ ನೀಡಬೇಕು.

ಕ) ವಂತಿಗೆ ಹಾಗೂ ವೆಚ್ಚಕ್ಕೆ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಬೇಕು.

**13. ಸಮ್ಮೇಳನಗಳು**

ಅ) ದಸಂಸ ಸಿದ್ಧಾಂತ, ಧ್ಯೇಯ, ಧೋರಣೆ ಪ್ರಚಾರ ಮಾಡಲು ಮತ್ತು ದಸಂಸ ಬಲಗೊಳಿಸಲು ಸಮ್ಮೇಳನಗಳನ್ನು ನಡೆಸಬೇಕು.

ಆ) ಈ ಸಮ್ಮೇಳನಗಳು ದಸಂಸ ಸರ್ವ ಸದಸ್ಯರ ಹಾಗೂ ಬೆಂಬಲಿಗರ ಸಮಾವೇಶಗಳು.

ಇ) ತಾಲ್ಲೂಕು ಸಮ್ಮೇಳನವು ಕನಿಷ್ಠ ವರ್ಷಕೊಮ್ಮೆ, ಜಿಲ್ಲಾ ಸಮ್ಮೇಳನವು ಕನಿಷ್ಠ ಎರಡು ವರ್ಷಗಳಿಗೊಮ್ಮೆ ಹಾಗೂ ರಾಜ್ಯ ಸಮ್ಮೇಳನವು ಕನಿಷ್ಠ ಮೂರು ವರ್ಷಗಳಿಗೊಮ್ಮೆ ನಡೆಯುತ್ತವೆ.

ಈ) ಸಮ್ಮೇಳನ ವ್ಯವಸ್ಥೆಯನ್ನು ಆಯಾ ಸಮಿತಿಗಳು ತಮ್ಮ ಮೇಲಿನ ಸಮಿತಿಯ ಜೊತೆಗೆ ಸಮಾಲೋಚಿಸಿ ಸಂಘಟಿಸಬೇಕು.

**14. ಶಿಸ್ತು**

ಅ) ದಸಂಸ ಹಿತಾಸಕ್ತಿಗಳಿಗೆ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗುವ ಸದಸ್ಯರ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ, ಅವರನ್ನು ಅಮಾನತ್ತಿನಲ್ಲಿಡುವ ಅಥವಾ ವಜಾ ಮಾಡುವ ಅಧಿಕಾರವು ಆಯಾ ಹಂತದ ಸಮಿತಿಗಳಿಗೆ ಇರುತ್ತದೆ. ಆದರೆ ಇಂಥ ಕ್ರಮ ಕೈಗೊಳ್ಳುವ ಮುನ್ನ ಆಯಾ ಸಮಿತಿಯು ತನ್ನ ಮೇಲಿನ ಸಮಿತಿಯ ಅನುಮತಿಯನ್ನು ಪಡೆದಿರಬೇಕು.

ಆ) ದಸಂಸ ಹಿತಾಸಕ್ತಿಗಳಿಗೆ ವಿರುದ್ಧವಾದ ತಳದ ಸಮಿತಿಯ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ, ಅಮಾನತ್ತುಗೊಳಿಸುವ ಅಥವಾ ವಜಾ ಮಾಡುವ ಅಧಿಕಾರವು ಆಯಾ ಸಮಿತಿಯ ಮೇಲಿನ ಸಮಿತಿಗಿದೆ. ಆದರೆ ಇಂತಹ ಕ್ರಮ ಕೈಗೊಳ್ಳುವ ಮುನ್ನ ರಾಜ್ಯ ಸಮಿತಿಯ ಅನುಮತಿಯನ್ನು ಪಡೆಯಬೇಕು.

ಇ) ಸದಸ್ಯ ಅಥವಾ ಸಮಿತಿಯ ವಿರುದ್ಧ ಮೇಲಿನ ರೀತಿಯಲ್ಲಿ ಯಾವುದೇ ಕ್ರಮ ಕೈಗೊಳ್ಳುವ ಮುಂಚೆ ಅಂಥ ವ್ಯಕ್ತಿಗೆ ಅಥವಾ ಸಮಿತಿಗೆ ತಮ್ಮ ಮೇಲಿನ ಆರೋಪಗಳನ್ನು ನಿರಾಕರಿಸಲು ಅವಕಾಶ ನೀಡಬೇಕು.

ಈ) ಕ್ರಮಕ್ಕೊಳಗಾದ ಯಾವುದೇ ಸದಸ್ಯ ಅಥವಾ ಸಮಿತಿಯ ಮೇಲಿನ ಸಮಿತಿಗೆ ಮೇಲ್ಮನವಿ ಸಲ್ಲಿಸುವ ಹಕ್ಕನ್ನು ಹೊಂದಿರುವುದು. ಆದರೂ ರಾಜ್ಯ ಸಮಿತಿಯ ತೀರ್ಮಾನವೇ ಅಂತಿಮವಾದುದು.

ಉ) ಯಾವುದೇ ಸದಸ್ಯ ಅಥವಾ ಸಮಿತಿಯ ಮೇಲೆ ಕ್ರಮ ಕೈಗೊಂಡ ಸಮಿತಿಯು ಕೂಡಲೇ ಈ ಬಗೆಗಿನ ವಿವರ ವರದಿಯನ್ನು ತನ್ನ ಮೇಲಿನ ಎಲ್ಲಾ ಸಮಿತಿಗಳಿಗೂ ಸಲ್ಲಿಸಬೇಕು.

ಊ) ಕ್ರಮ ಕೈಗೊಂಡ ಮಾಹಿತಿಯನ್ನು ತಳದ ಸಮಿತಿಗಳು ಜಿಲ್ಲಾ ಸಮಿತಿಯಿಂದ ಹಾಗೂ ಜಿಲ್ಲಾ ಸಮಿತಿಗಳು ರಾಜ್ಯ ಸಮಿತಿಯಿಂದ ಅನುಮತಿ ಪಡೆದು ಮಾತ್ರ ಬಹಿರಂಗಪಡಿಸಬಹುದು.[7]

**15. ಕೋರಂ**

ಪ್ರತಿ ಸಭೆಗೂ 2/3 ಪದಾಧಿಕಾರಿಗಳು ಪ್ರತಿನಿಧಿಗಳು ಭಾಗವಹಿಸಿದಾಗ ಮಾತ್ರ ಕೋರಂ ಇರುತ್ತದೆ.

**16. ಖಾಲಿ ಸ್ಥಾನ ಭರ್ತಿ**

ದಸಂಸ ಸಮಿತಿಗಳಲ್ಲಿ ಯಾವುದೇ ಕಾರಣದಿಂದ ಸ್ಥಾನಗಳು ತೆರವಾದರೆ ಅವುಗಳಿಗೆ ಮೂರು ತಿಂಗಳೊಳಗಾಗಿ ಚುನಾವಣೆ ನಡೆಸಬೇಕು.

**17. ಸಂವಿಧಾನ ತಿದ್ದುಪಡಿ**

ರಾಜ್ಯ ಸಮಿತಿಯನ್ನು ಚುನಾಯಿಸುವ ಅಧಿಕಾರವುಳ್ಳವರು 2/3 ಸಂಖ್ಯೆಯಲ್ಲಿ ಹಾಜರಿದ್ದರೆ ಸಂವಿಧಾನ ತಿದ್ದುಪಡಿ ಮಾಡಬಹುದು. ಎರಡು ವರ್ಷಗಳಿಗೊಮ್ಮೆ ನಡೆಯುವ ರಾಜ್ಯ ಸಮಿತಿ ಆಯ್ಕೆ ಸಭೆಯಲ್ಲೇ ಸಂವಿಧಾನ ತಿದ್ದುಪಡಿ ಮಾಡಬಹುದು. ಸಂವಿಧಾನ ತಿದ್ದುಪಡಿ ಸಲಹೆಗಳನ್ನು ರಾಜ್ಯ ಸಮಿತಿಗೆ ಕಳಿಸುವ ಅಧಿಕಾರವು ಪ್ರಾಥಮಿಕ ಸದಸ್ಯರಿಗೆ ಇದೆ. ಆಯ್ಕೆ ಸಭೆಗೆ ಮೂರು ತಿಂಗಳ ಮುಂಚೆ ಸಲಹೆಗಳು ರಾಜ್ಯ ಸಮಿತಿಗೆ ತಲುಪಬೇಕು. ತಿದ್ದುಪಡಿ ಸಲಹೆಗಳನ್ನು ಸ್ವೀಕರಿಸಿದ ರಾಜ್ಯ ಸಮಿತಿಯು ಅವುಗಳನ್ನು ಸಾಮಾನ್ಯೀಕರಿಸಿ, ತಿದ್ದುಪಡಿ ಹಕ್ಕು ಇರುವ ಸದಸ್ಯರಿಗೆ ಆಯ್ಕೆ ಸಭೆಗೆ ಒಂದು ತಿಂಗಳ ಮುಂಚೆ ಕಳುಹಿಸಬೇಕು. ಆಯ್ಕೆ ಸಭೆಯಲ್ಲಿ ಹೊಸ ರಾಜ್ಯ ಸಮಿತಿ ರಚನೆಯಾದ ನಂತರ ಸಂವಿಧಾನ ತಿದ್ದುಪಡಿ ಸಲಹೆಗಳನ್ನು ಪರಿಶೀಲಿಸಬೇಕು.

**18. ಆಸ್ತಿ**

ದಸಂಸ ತನ್ನ ಗುರಿ ಸಾಧನೆಗೆ ಅನುಕೂಲವಾಗುವಂತೆ ಆಸ್ತಿ ನಿಧಿ ಹೊಂದುವ ಅಥವಾ ತ್ಯಜಿಸುವ, ಒಪ್ಪಂದಗಳಲ್ಲಿ ಪಾಲುಗೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ. ಯಾವುದೇ ಹಂತದ ಸಮಿತಿಯು ತಾನು ಹೊಂದಿರುವ ಆಸ್ತಿ ಹಾಗೂ ನಿಧಿಯ ಮಾಹಿತಿಯನ್ನು ತನ್ನ ಮೇಲಿನ ಸಮಿತಿಗಳಿಗೆ ಕೊಡಬೇಕು.

**19. ಸಮಿತಿಗಳ ಅಸ್ತಿತ್ವ**

ಎ) ವಿವಿಧ ಹಂತಗಳ ಸಮಿತಿಗಳು ಕೆಳಕಂಡಂತಿದ್ದರೆ ಮಾತ್ರ ಅಧೀಕೃತ ಅಸ್ತಿತ್ವವನ್ನು ಪಡೆಯುತ್ತದೆ.

ಬಿ) ಆ ಪಂಚಾಯ್ತಿ ವ್ಯಾಪ್ತಿಯ ಅರ್ಧಕ್ಕಿಂತ ಹೆಚ್ಚು ಗ್ರಾಮಗಳಲ್ಲಿ ಸಮಿತಿಗಳಿದ್ದರೆ ಮಾತ್ರ ಗ್ರೂಪ್ ಪಂಚಾಯ್ತಿ ಸಮಿತಿಯ ಅಸ್ತಿತ್ವ ಇರುತ್ತದೆ.

ಸಿ) ಆ ಹೋಬಳಿಯ ಅರ್ಧಕ್ಕಿಂತ ಹೆಚ್ಚು ಗ್ರೂಪ್ ಪಂಚಾಯ್ತಿಗಳಲ್ಲಿ ಸಮಿತಿಗಳು ಇದ್ದರೆ ಮಾತ್ರ ಹೋಬಳಿ ಸಮಿತಿ ಅಸ್ತಿತ್ವಕ್ಕೆ ಬರುತ್ತದೆ.

ಡಿ) ಆ ತಾಲ್ಲೂಕಿನ ಅರ್ಧಕ್ಕಿಂತ ಹೆಚ್ಚು ಹೋಬಳಿ ಸಮಿತಿಗಳಿದ್ದರೆ ಮಾತ್ರ ತಾಲ್ಲೂಕು ಸಮಿತಿ ಅಸ್ತಿತ್ವಕ್ಕೆ ಬರುತ್ತದೆ.

ಇ) ಆ ಜಿಲ್ಲೆಯ ಅರ್ಧಕ್ಕಿಂತ ಹೆಚ್ಚು ತಾಲ್ಲೂಕುಗಳಲ್ಲಿ ಸಮಿತಿಗಳಿದ್ದರೆ ಮಾತ್ರ ಜಿಲ್ಲಾ ಸಮಿತಿ ಅಸ್ತಿತ್ವದಲ್ಲಿ ಇರುತ್ತದೆ.

ಎಫ್) ರಾಜ್ಯದ ಅರ್ಧಕ್ಕಿಂತ ಹೆಚ್ಚು ಜಿಲ್ಲೆಗಳಲ್ಲಿ ಸಮಿತಿಗಳಿದ್ದರೆ ಮಾತ್ರ ರಾಜ್ಯ ಸಮಿತಿ ಅಸ್ತಿತ್ವಕ್ಕೆ ಬರುತ್ತದೆ.

(ಅಧೀಕೃತ ಸಮಿತಿಗಳು ಅಸ್ತಿತ್ವಕ್ಕೆ ಬರುವಂತೆ ಮಾಡಲು ಹಂಗಾಮಿ ಸಮಿತಿಯನ್ನು ಆಯಾ ಹಂತದ ಮೇಲಿನ ಸಮಿತಿಯವರು ರಚಿಸಬಹುದು. ಹಂಗಾಮಿ ಸಮಿತಿಗೆ ಕಾರ್ಯಕಾರಿ ಸಮಿತಿಯಲ್ಲಿ ಭಾಗವಹಿಸುವ ಹಕ್ಕು ಮಾತ್ರ ಇದ್ದು, ಮತದಾನದ ಹಕ್ಕು ಇರುವುದಿಲ್ಲ. ಈ ರೀತಿಯಲ್ಲಿ ಅಧೀಕೃತ ಹಂತದ ಸಮಿತಿಗಳು ಅಸ್ತಿತ್ವಕ್ಕೆ ಬರುವ ತನಕ ಈ ನಿಯಮವು ರಾಜ್ಯ ಸಮಿತಿಗೆ ಮಾತ್ರ ಅನ್ವಯವಾಗುವುದಿಲ್ಲ.)

**20. ಚುನಾವಣಾ ಪದ್ಧತಿ**

ಗ್ರಾಮ ಸಮಿತಿ, ಗ್ರೂಪ್ ಪಂಚಾಯ್ತಿ ಸಮಿತಿ, ಹೋಬಳಿ ಸಮಿತಿ ಮತ್ತು ತಾಲ್ಲೂಕು ಸಮಿತಿಗಳವರೆಗೆ ನೇರ ಚುನಾವಣಾ ಪದ್ಧತಿಯನ್ನು ಅನುಸರಿಸುವುದು. ಜಿಲ್ಲಾ ಮತ್ತು ರಾಜ್ಯ ಸಮಿತಿಗಳನ್ನು ರಚಿಸುವಾಗ ಆದ್ಯತೆ ಮತ ಚುನಾವಣಾ ಪದ್ಧತಿಯನ್ನು ಅನುಸರಿಸುವುದು. ವಿಸರ್ಜಿತವಾಗುವ ಸಮಿತಿಯು ಚುನಾವಣಾಧಿಕಾರಿಯ ಆಯ್ಕೆ ಮಾಡುವುದು.[8]

**ಉಪಸಂಹಾರ**

ಒಟ್ಟಾರೆ ಕ.ದ.ಸಂ.ಸ.ದ ಸಂವಿಧಾನವು ಈ ಸಂಘಟನೆಯ ಎಲ್ಲಾ ಕಾರ್ಯಕರ್ತರು, ಪ್ರತಿನಿಧಿಗಳು, ಸದಸ್ಯರು, ಪದಾಧಿಕಾರಿಗಳು, ಸಂಚಾಲಕರುಗಳು, ಸಂಘಟನಾ ಸಂಚಾಲಕರುಗಳು, ಖಜಾಂಚಿಗಳು ಹಾಗೂ ಸಮಾಜದ ದಲಿತ ಸಮುದಾಯಗಳಲ್ಲಿ ತಮ್ಮಗಳ ಹಕ್ಕುಗಳನ್ನು ಪಡೆದುಕೊಳ್ಳಲು ಏಕತೆ, ಐಕ್ಯತೆ, ಹೊಂದಾಣಿಕೆ, ಬಾಂಧವ್ಯ ಮತ್ತು ಅನ್ಯಾಯದ ವಿರುದ್ಧ ಪ್ರತಿಭಟಿಸುವ ಕೆಚ್ಚನ್ನು ಸೃಷ್ಟಿಸಿತ್ತು. ಮಾತ್ರವಲ್ಲದೆ ಮೇಲ್ಜಾತಿಗಳ ಪ್ರಗತಿಪರರು, ಬುದ್ಧಿಜೀವಿಗಳು, ಎಡಪಂಥೀಯ ಧೋರಣೆಯ ಸಂಘಟನೆಗಳ ಮುಂದಾಳುಗಳು ಕೂಡ ಪರಸ್ಪರ ಸಹಕಾರದಿಂದ ಜಾತೀವಾದಿಗಳ ಕ್ರೌರ್ಯಗಳ ವಿರುದ್ಧದ ಹೋರಾಟಗಳಿಗೆ ಕೈಜೋಡಿಸಲು ನಾಂದಿಯಾಯಿತು ಎಂದು ಹೇಳಬಹುದು.

**ಕೊನೆಟಿಪ್ಪಣಿಗಳು**

1. ರುದ್ರಪ್ಪ ಹನಗವಾಡಿ. (2001). ಸಂಘರ್ಷದ ರೂವಾರಿ ಪ್ರೊ.ಬಿ.ಕೆ, ಪು.ಸಂ.4
2. ದೇವನೂರು ಮಹಾದೇವರವರ ಸಂದರ್ಶನ. ಶನಿವಾರ, 8 ಜನವರಿ, 2011
3. ಸಿದ್ದಲಿಂಗಯ್ಯರವರ ಸಂದರ್ಶನ. ಶನಿವಾರ, 18 ಡಿಸೆಂಬರ್, 2010
4. ಕೋಟಗಾನಹಳ್ಳಿ ರಾಮಯ್ಯರವರ ಸಂದರ್ಶನ. ಸೋಮವಾರ, 20 ಡಿಸೆಂಬರ್, 2010
5. ಹೆಚ್. ಗೋವಿಂದಯ್ಯರವರ ಸಂದರ್ಶನ. ಭಾನುವಾರ, 2 ಜನವರಿ, 2011
6. ಪಂಚಮ ಪತ್ರಿಕೆ. ಸಂಪುಟ 8, ಸಂಚಿಕೆ22–23, ಡಿಸೆಂಬರ್ 5–20, 1984, ಪು.ಸಂ.1
7. ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂವಿಧಾನ. ಪ್ರಕಟಣೆ–ಕರ್ನಾಟಕ ದಲಿತ ಸಂಘರ್ಷ ಸಮಿತಿ, ಪು.ಸಂ.20
8. ಮೇಲಿನದೇ.,

IIMRD JOURNALS